**ಸಾಕ್ಷಿಗೆ ದಿನಾಂಕಃ03-02-2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು :: ಆರೋಪಿ ಪರ ಶ್ರೀಮತಿ ಸಿ.ಎನ್.ಜೆ ವಕೀಲರಿಂದ ::**

ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ನನಗೆ ಅತ್ತಿನಾಳು ಗ್ರಾಮ ಒಂದು ಎಕರೆ 5 ಗುಂಟೆ ತೋಟದ ಜಮೀನು ಇರುತ್ತದೆ. ಸದರಿ ಆಸ್ತಿಯ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನಗೆ ಮತ್ತು ಆರೋಪಿಗೆ ಅವರ ಗಂಡನ ಕಡೆಯಿಂದ ಪರಿಚಯವಿರುತ್ತದೆ. ನನಗೆ ಹಾಗೂ ಆರೋಪಿಗೆ ವ್ಯಯಕ್ತಿಕ ಪರಿಚಯವಿರುದಿಲ್ಲ ಎಂದರೆ ಸರಿಯಲ್ಲ. ನನಗೂ ಹಾಗೂ ಆರೋಪಿಗೂ ಆ ರೀತಿ ಪರಿಚಯವಿಲ್ಲದಿರುವ ಕಾರಣ ನಮ್ಮ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಪಿರ್ಯಾದಿಯಲ್ಲಿ ತೋರಿಸಿರುವಂತೆ ಆರೋಪಿ ಅಥವಾ ಅವರ ಗಂಡ ನನಗೆ 5 ಲಕ್ಷ ಹಣ ನೀಡಲು ಬಾದ್ಯಸ್ಥರು ಆಗಿರುವುದಿಲ್ಲ. ಆರೋಪಿಯಾಗಲಿ ಅವರ ಗಂಡನಾಗಲಿ ನಮ್ಮ ಮನೆಗೆ ಬಂದಿರುವುದಿಲ್ಲ ಹಾಗೂ ನನ್ನಿಂದ ಯಾವುದೇ ಹಣ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿ ಮತ್ತು ಅವರ ಗಂಡಿನಿಗೆ ದಿನಾಂಕಃ 03-11-2022 ರಂದು ನಗದಿನ ಮುಖಾಂತರ ಹಣ ನೀಡಿರುತ್ತೇನೆ. ಸದರಿ ಸಮಯದಲ್ಲಿ ನಮ್ಮ ಮನೆಯಲ್ಲಿ ನನ್ನ ಹೆಂಡತಿ ಒಳಗೆ ಇದ್ದರು. ಆರೋಪಿ ನೀಡಿರುತ್ತಾರೆ ಎನ್ನಲಾದ ಚೆಕ್ ಬ್ಯಾಂಕಿನಿಂದ ಅಮಾನ್ಯವಾಗಿ ಹಿಂದಿರುಗಿದ ನಂತರ ನನ್ನ ವಕೀಲರ ಮುಖಾಂತರ ತಿಳುವಳಿಕೆ ನೋಟಿಸ್ ನೀಡಿರುತ್ತೇನೆ. ಸದರಿ ನೋಡಿಸ್ ಅನ್ನು 23-05-2023 ರಂದು ನೀಡಿರುತ್ತೆನೆ. ಸದರಿ ನೋಟಿಸ್ ನಮಗೆ ದಿನಾಂಕಃ26-05-2023 ರಂದು ಹಿಂದಿರುತ್ತದೆ ಎಂದರೆ ಸರಿ. ನಾನು ಪಿರ್ಯಾದಿಯಲ್ಲಿ ತಿಳಿಸಿರುವಂತೆ ಆರೋಪಿಯು ಯಾವುದೇ ನೋಟಿಸನ್ನು ತಿರಸ್ಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನಿಂದ ಆರೋಪಿಗೆ ಯಾವುದೇ ನೋಟಿಸ್ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-5 ಅಂಚೆ ಲಾಕೋಟೆ ಪ್ರಕಾರ ಅಂಚೆ ಇಲಾಖೆಯವರು ಸದರಿ ನೋಟಿಸನ್ನು unclaim ಎನ್ನುವ ಕಾರಣದಿಂದ ಹಿಂದಿರುಗಿಸಿರುತ್ತಾರೆ ಎಂದರೆ ಸರಿ. ಅದರಿಂದ ಆರೋಪಿಗೆ ನೋಟೀಸ್ ತಲುಪಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಯಾವುದೇ ನೋಟಿಸ್ ತಲುಪದ ಕಾರಣ ಅವರಿಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ತಿಳಿದಿರುವುದಿಲ್ಲ

ಎಂದರೆ ಸರಿಯಲ್ಲ. ನನಗೆ 5 ಲಕ್ಷ ಹಣವನ್ನು ನನಗೆ ಆರ್ಥಿಕ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ:: **ಮರುವಿಚಾರಣೆ ಇಲ್ಲ** :: ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-
ಸಿ.ಜೆ. ಮತ್ತು ಹೆ. ಜೆ.ಎಮ್.ಎಫ್.ಸಿ.,
ತರೀಕೆರೆ.

ಸಾಕ್ಷಿಯ ಸಹಿ::